C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 66/2021

**ಚಾ.ಸಾ.–16 ಪ್ರಾ.ಸಾ.–11**

| | |
|---|---|
| **ಸಾಕ್ಷಿದಾರರ ಹೆಸರು** | **ರಾಜಣ್ಣ ಟಿ.** |
| **ತಂದೆಯ ಹೆಸರು** | **ಲೇಟ್ ತಿಮ್ಮೇಗೌಡ** |
| **ವಯಸ್ಸು** | **65 ವರ್ಷಗಳು** |
| **ಉದ್ಯೋಗ** | **ನಿವೃತ್ತ ಎ.ಎಸ್.ಐ** |
| **ವಾಸ** | **ಹೆಚ್.ಕೆ.ವಿ ನಗರ, ಮದ್ದೂರು ಟೌನ್** |

**ದಿನಾಂಕಃ 06.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು ಫೆಬ್ರವರಿ 2018 ರಿಂದ ಮಾರ್ಚ್ 2021 ರವರಗೆ ಬೆಸಗರಹಳ್ಳಿ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ18.12.2020 ರಂದು ಸಂಜೆ 7–30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಚಾಸಾ- 19 ರವರು ಚಾಸಾ- 1 ರವರು ಹಲ್ಲೆ ಪ್ರಕಣದಲ್ಲಿ ಮದ್ದೂರು ಸರ್ಕರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂಬ ಮಾಹಿತಿ ಬಂದಿದ್ದು ಅಸ್ಪತ್ರೆಗೆ ಹೋಗಿ ಮೇಮೋ ಪಡೆದು ಗಾಯಳುವಿನ ಹೇಳಿಕೆ ಪಡೆದುಕೊಂಡು ಬರಲು ನನಗೆ ತಿಳಿಸಿದ್ದು ಅದರಂತೆ ಅದೇ ದಿನ ರಾತ್ರಿ 8.00 ಗಂಟೆಗೆ ಮದ್ದೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿ ಮೆಮೋ ಪಡೆದುಕೊಂಡು ನಂತರ ವೈದ್ಯರ ಬಳಿ ವಿಚಾರವನ್ನು ತಿಳಿಸಿ ಗಾಯಳುವಿನ ಹೇಳಿಕೆ ಪಡೆಯುವ ಸಮಯ ಹಾಜರಿರಬೇಕೆಂದು ಕೋರಿ ವೈದ್ಯರು ಅದಕ್ಕೆ ಒಪ್ಪಿ ಮದ್ದೂರು ಸರ್ಕಾರಿ ಆಸ್ಪತ್ರೆಯ ಗಂಡಸರ ವಾರ್ಡಿನಲ್ಲಿ ದಾಖಲಾಗಿದ್ದ ಚಾಸಾ- 1 ರವರ ಹೇಳಿಕೆಯನ್ನು

ವೈದ್ಯರ ಸಮಕ್ಷಮ ರಾತ್ರಿ 8.15 ರಿಂದ 8.40 ರವರಗೆ ದಾಖಲಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿ ವೈದ್ಯರ ಮತ್ತು ಗಾಯಳುವಿನ ಸಹಿ ಪಡೆದುಕೊಂಡಿರುತ್ತೇನೆ, ಹೇಳಿಕೆ ದಾಖಲಿಸಿದ ಬಗ್ಗೆ ಹಿಂಭಾಗದಲ್ಲಿ ಇರುವ ನನ್ನ ಸಹಿಯನ್ನ ಗುರುತಿಸಿದ್ದ ಅದನ್ನ **ನಿಪಿ-1(ಸಿ)** ಎಂದು ಗುರುತಿಸಲಾಗಿದೆ. ನಂತರ ರಾತ್ರಿ 9.15 ಗಂಟೆಗೆ ಠಾಣೆಗೆ ಹಾಜರಾಗಿ ಸದರಿ ಹೇಳಿಕೆಯನ್ನು ಚಾಸಾ- 19 ರವರಿಗೆ ನೀಡಿರುತ್ತೇನೆ. ವೈದ್ಯಾಧಿಕಾರಿಗಳಿಂದ ಪಡೆದು ಸದರಿ ಪೋಲೀಸ್ ಮಾಹಿತಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಗಿದೆ.

**3.** ದಿಃ19.12.2020 ರಂದು ಚಾಸಾ- 19 ರವರ ಜೊತೆ ಪ್ರಕರಣದ ಆರೋಪಿಗಳ ತಲಾಷಿಗಾಗಿ ಬೆಳಿಗ್ಗೆ 5.30 ಗಂಟೆಗೆ ಸೀನಪ್ಪನದೊಡ್ಡಿ ಗ್ರಾಮಕ್ಕೆ ಹೋಗಿ ಮನೆಯಲ್ಲಿದ್ದ ಆರೋಪಿಗಳನ್ನ ಚಾಸಾ- 19 ರವರ ವಶಕ್ಕೆ ಪಡೆದು ಠಾಣೆಗೆ ವಾಪಸ್ಸು 6.00 ಗಂಟೆಗೆ ಬಂದಿರುತ್ತೇನೆ. ಸದರಿ ಆರೋಪಿಗಳನ್ನು ಬೆಳಿಗ್ಗೆ 7.00 ಗಂಟೆಗೆ ಚಾಸಾ- 20 ರವರ ಕಛೇರಿಗೆ ಕರೆದುಕೊಂಡು ಹೋಗಿ ಹಾಜರುಪಡಿಸಿರುತ್ತೇವೆ. ಸದರಿ ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಸಿ.ಆರ್ ವಕೀಲರಿಂದ</u>**

**4.** ಆ ದಿನ ಗಂಡಸರ ವಾರ್ಡಿನಲ್ಲಿ ಚಾಸಾ- **1** ರವರು ಮಾತ್ರ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಗಾಯಳು ಇದ್ದ ವಾರ್ಡಿಗೆ ನಾನು ಮತ್ತು ವೈದ್ಯಾಧಿಕಾರಿಗಳು ಹೋಗಿರುತ್ತೇವೆ. ಸದರಿ ವಾರ್ಡಿನಲ್ಲಿ ಎರಡು ಬೆಡ್ಡುಗಳು ಇದ್ದು ಅದರ ಒಂದು ಬೆಡ್ಡಿನಲ್ಲಿ ಗಾಯಳು ಮಲಗಿದ್ದರು. ಗಾಯಳು ಬೆಡ್ ಮೇಲೆ ಎದ್ದ ಕುಳಿತು ಹೇಳಿಕೆಯನ್ನು ನೀಡಿರುತ್ತಾರೆ. ನಿಪಿ-**1** ಹೇಳಿಕೆಯನ್ನು ಪೋಲೀಸ್ ಠಾಣೆಯಲ್ಲಿಯೇ ಸಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ– 1 ರವರಿಗೆ ಯಾವುದೇ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ಅವರಿಗೆ ಚಿಕಿತ್ಸೆ ಪಡೆದಕೊಳ್ಳುವ ಪ್ರಸಂಗವೇ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ– 1 ರವರ ಜೊತೆಗೆ ಶಾಮಿಲಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಬೆಸಗರಹಳ್ಳಿಯಿಂದ ಸೀನಪ್ಪನದೊಡ್ಡಿ ಸುಮಾರು 8 – 10 ಕಿಮಿ ದೂರ ಇದೆ. ಸರ್ಕಾರಿ ಜೀಪಿನಲ್ಲಿ ಅಲ್ಲಿಗೆ ಹೋಗಿರುತ್ತೇನೆ. ಮನೆಯಲ್ಲಿ ಇದ್ದ ಆರೋಪಿತರನ್ನು ಠಾಣೆಯಲ್ಲಿದ್ದ ಸಿಬ್ಬಂದಿಗಳು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸೀನಪ್ಪನ ದೊಡ್ಡಿಗೆ ಹೋಗಿರುವುದೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**